

ಧರೆ ಉರಿದರೆ...
ಪ್ರಕೃತಿಯೇ
ಯುದ್ಧ ಸಾರಿದರೆ
ಎದುರಿಸುವುದಾದರೂ
ಹೇಗೆ...



ಈ ಮಗುವಿನ
ಕಣ್ಣುಗಳಲ್ಲಿನ
ಪ್ರಶ್ನೆಗಳಿಗೆ
ಉತ್ತರಿಸುವವರು
ಯಾರು?

ಏಕಾಏಕಿ ಚಲನೆ ಸಂಭವಿಸಿದಾಗ ಆ ಭಾಗದ ಭೂಮಿ ಕಂಪಿಸುತ್ತದೆ. ಭೂಮಿಯ ಅತ್ಯಂತ ಹೊರ ಭಾಗ – ಕವಚವೆನಿಸಿರುವ ಚಿಪ್ಪು ಏಳೆಂಟು ಪ್ರಮುಖ ಫಲಕಗಳಾಗಿ ತುಂಡಾಗಿದೆ. ಇವುಗಳ ಸಾಂದರ್ಭಿಕ ಚಲನೆ ಹೇಗಿರುತ್ತದೆ ಎಂಬುದರ ಮೇಲೆ ಭೂಕಂಪ, ಜ್ವಾಲಾಮುಖಿ, ಪರ್ವತ ಸೃಷ್ಟಿ ಮತ್ತು ಸಾಗರ ತಳದ ಪ್ರಪಾತಗಳು ಸಂಭವಿಸುತ್ತವೆ. ಇವು ದೂರ ಸರಿದಾಗ ಭೂಮಿಯ ಹೊಸ ಮೇಲ್ಪದರ ಸೃಷ್ಟಿಯಾಗುತ್ತದೆ. ಒಂದರ ಪಕ್ಕ ಒಂದು ಸರಿಯುವಾಗ ಉಂಟಾಗುವ ತಿಕ್ಕಾಟ, ಘರ್ಷಣೆಗಳಿಂದ ಆ ಫಲಕಗಳ ಮೇಲೆ ನಿಂತಿರುವ ಪ್ರದೇಶಗಳು ಕಂಪನಕ್ಕೊಳಗಾಗುತ್ತವೆ.

## ಪರಿಹಾರ-ಉಪಾಯಗಳ ಹುಡುಕುತ್ತ...

ಭೂಕಂಪನಗಳನ್ನು ತಡೆಯಲಾಗುವುದಿಲ್ಲ. ಕನಿಷ್ಠ ಪಕ್ಷ ಅವುಗಳನ್ನು ಸ್ಪಷ್ಟವಾಗಿ ಊಹಿಸುವುದೂ ಸಾಧ್ಯವಿಲ್ಲ. ಆದರೆ ಭೂಮಿಯ ಸಂರಚನೆಯ ಆಧಾರದಲ್ಲಿ ಎಲ್ಲೆಲ್ಲಿ ಭೂಕಂಪನ ಸಂಭವಿಸಬಹುದೆಂಬುದನ್ನು ಹೇಳಬಹುದು. ಈಗ ಟರ್ಕಿ, ಸಿರಿಯಾಗಳಲ್ಲಿ ಎಲ್ಲ ಕಟ್ಟಡಗಳೂ ಉರುಳಿಲ್ಲ. ಏನಿದರ ಅರ್ಥ? ಪ್ರಬಲ ಭೂಕಂಪವನ್ನೂ ತಾಳಿಕೊಂಡಿವೆ ಎಂದರೆ ಅವುಗಳನ್ನು ಕಟ್ಟಲು ಬಳಸಿದ ತಂತ್ರಜ್ಞಾನಕ್ಕೆ ತಲೆಬಾಗಬೇಕು. ನಗರ ಪ್ರದೇಶಗಳಲ್ಲಿರುವ ಜನಬಾಹುಳ್ಯಕ್ಕೆ ವಸತಿ ಕಲ್ಪಿಸಲು ಒತ್ತೊತ್ತಾಗಿ ಮನೆ ನಿರ್ಮಾಣ ನಡೆಯುತ್ತದೆ. ಬಹುಮಹಡಿ ಕಟ್ಟಡಗಳು ತಲೆ ಎತ್ತುತ್ತವೆ. ಜಗತ್ತಿನ ಒಟ್ಟು ಜನಸಂಖ್ಯೆಯ 430 ಕೋಟಿ ಜನ ನಗರಗಳಲ್ಲಿದ್ದಾರೆ. ಇದರ ಶೇ. 80ರಷ್ಟು ಜನ ಹಿಂದುಳಿದ ಅಥವಾ ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿರುತ್ತಾರೆ. ಭೂಕಂಪನದ ವಲಯಗಳಲ್ಲೇ ಅವರು



### ಲಾತೂರಿನ ದಾರುಣ ಭೂಕಂಪ

1993ರ ಸೆಪ್ಟೆಂಬರ್ 30ರ ನಸುಕಿನಲ್ಲಿ ಸಂಭವಿಸಿದ ಲಾತೂರಿನ ಭೂಕಂಪನವನ್ನು ಭಾರತೀಯರಾರೂ ಮರೆಯಲು ಸಾಧ್ಯವಿಲ್ಲ. ಹಿಂದಿನ ದಿನ ರಾತ್ರಿ ವಾರ್ಷಿಕ ಗಣೇಶ ವಿಸರ್ಜನೆಯನ್ನು ಶ್ರದ್ಧಾಭಕ್ತಿ ಸಡಗರಗಳಿಂದ ಮುಗಿಸಿದ್ದ ಲಾತೂರಿನ ಜನ ಸುಖನಿದ್ರೆಗೆ ಜಾರಿದ್ದರು. ಅದೇ ಅವರಲ್ಲಿ ಅನೇಕರ ಕೊನೆಯ ನಿದ್ದೆಯಾಗಿತ್ತು. ಸುತ್ತಲಿನ 50 ಹಳ್ಳಿಗಳ ಜನ ಮಲಗಿದ್ದಲ್ಲೇ ಜೀವಂತ ಸಮಾಧಿಯಾಗಿದ್ದರು. ಬೆಳಗಿನ ಜಾವ 2 ಗಂಟೆ 56 ನಿಮಿಷಕ್ಕೆ ಶುರುವಾದ ಭೂಕಂಪನ 47 ಸೆಕೆಂಡುಗಳವರೆಗೆ ಮುಂದುವರೆದಿತ್ತು. ನಂತರ 4.41ರ ಹೊತ್ತಿಗೆ 54 ಸೆಕೆಂಡು, ಮತ್ತೆ 12, ನಂತರ 22, ಆಮೇಲೆ 2 – ಹೀಗೆ ಸತತವಾಗಿ ಭೂಮಿ ಕಂಪಿಸಿ ಭೀಕರ ಅನಾಹುತ ಉಂಟುಮಾಡಿತ್ತು. ಮನುಷ್ಯರ ಸಾವಿನ ಸಂಖ್ಯೆ ಹತ್ತು ಸಾವಿರ ದಾಟಿತ್ತು. ದನಕರುಗಳು ಕಟ್ಟಿದ ಕೊಟ್ಟಿಗೆಯಲ್ಲೇ ಸಮಾಧಿಯಾಗಿದ್ದವು. ಒಂದೂವರೆ ಲಕ್ಷಕ್ಕೂ ಹೆಚ್ಚು ಜನ ನಿರ್ವಸಿತರಾದರು. ಕಿಲಾರಿ ಗ್ರಾಮದ ಹದಿನೈದು ಸಾವಿರ ಜನರಲ್ಲಿ ಕೇವಲ ಮೂರೂವರೆ ಸಾವಿರ ಜನ ಬದುಕುಳಿದಿದ್ದರು. ಲಾತೂರ್ ಜಿಲ್ಲೆಯ 25 ಹಳ್ಳಿಗಳು ಸರ್ವನಾಶವಾಗಿದ್ದವು. ಭೂಕಂಪನದ ತೀವ್ರತೆ ಆಂಧ್ರ, ತಮಿಳುನಾಡು, ಕೇರಳ, ಗುಜರಾತ್, ಮಧ್ಯಪ್ರದೇಶ, ಗೋವಾ ಮತ್ತು ನಮ್ಮ ರಾಜ್ಯದ ವಿಜಯಪುರ, ಕಲಬುರಗಿ, ಬೀದರ್‌ಗಳಿಗೂ ವ್ಯಾಪಿಸಿತ್ತು. ಎರಡು ಸಾವಿರಕ್ಕೂ ಹೆಚ್ಚು ಮನೆಗಳು ಕುಸಿದುಬಿದ್ದವು. ಏಳು ಜನರ ಶವ ಅವಶೇಷಗಳಡಿ ಸಿಕ್ಕವು. ವಿಶ್ವಪ್ರಸಿದ್ಧ ಗೋಲಗುಮ್ಮಟದ ಒಂದು ಮಿನಾರಿಗೆ ಧಕ್ಕೆಯಾಗಿ, ಅದು ವಾಲಿಕೊಂಡಿತ್ತು.